ಶ್ರೀ ರಾಜುಗೌಡ.—ಸನ್‌ಮಾನ್ಯ ಅಧ್ಯಕ್ಷರೆ ಇದೇರೀತಿ ಗ್ರಾಮಾಂತರ ಪ್ರದೇಶಗಳಲ್ಲಿ ಪಂಚಾಯತ್ ರಾಜ್ಯಗಳ ವ್ಯಾಪ್ತಿಗೆ ಬರತಕ್ಕಂಥ ಅನಧಿಕೃತ ಮನೆಗಳನ್ನು ಕೆಡುವಲು ಸಾಧ್ಯತೆ ಇದೆ. ಬಹುಶಃ ಈ ನಿರ್ಣಯದಲ್ಲಿ ಇರತಕ್ಕಂಥದ್ದನ್ನು ತಾವು ಅರ್ಥಮಾಡಿಕೊಳ್ಳಬೇಕು.

ಅಧ್ಯಕ್ಷರೇ ಮಾನ್ಯ ಸದಸ್ಯರಾದ ಗಂಗಾಧರನ್‌ರವರು ಹೇಳಿಹಾಗೆ ನಾನು ಬಹಳ ಸಾರಿ ಈ ವಿಷಯದಲ್ಲಿ ಬರವಣಿಗೆಯಲ್ಲಿ ಕೊಟ್ಟಿದ್ದೇನೆ. ವಲಸೆ ಬರತಕ್ಕವರು ಐನೂರು ಸಾವಿರ ಕರೆದುಕೊಂಡು ಬಂದಿದ್ದಾರೆ. ಅವರೆಲ್ಲರೂ ಕೂಡ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದಾರೆ. ಆ ಗುಡಿಸಲುಗಳು ಯಾವ ಪಂಚಾಯಿತಿಯ ವ್ಯಾಪ್ತಿಗೂ ಬರುವುದಿಲ್ಲ. ಮಹಾದೇಶ್ವರ ಪಾಲಾರ್ ನಡುವೆ ಅನೇಕ ಕಡೆಗಳಲ್ಲಿ ಗುಡಿಸಲುಗಳು ನಿರ್ಮಾಣವಾಗಿವೆ, ಯಾವುದೇ ಪಂಚಾಯಿತಿಯ ಲೈಸೆನ್ಸ್ ಇಲ್ಲದೇ ಗುಡಿಸಲುಗಳು ನಿರ್ಮಾಣವಾಗಿವೆ. ಅನೇಕ ಸಾರಿ ಗುಡಿಸಲುಗಳಿಗೆ ಬೆಂಕಿ ಬಿದ್ದಾಗ ಕೊಳ್ಳಗಾಲ ತಾಲ್ಲೂಕು ತಹಶೀಲ್ದಾರ್‌ರವರ ಕಛೇರಿಯಿಂದ ೩೦೦ ರೂಪಾಯಿ ಪರಿಹಾರವನ್ನು ಸಹ ಪಡೆದುಕೊಂಡಿದ್ದಾರೆ. ಅವರು ತಮ್ಮ ಹೆಸರುಗಳನ್ನು ಮತದಾರರ ಪಟ್ಟಿಗೆ ಸೇರಿಸಿಕೊಂಡು ನಮಗೆ ರಸ್ತೆ ಬೇಕು. ದೀಪಬೇಕಂ. ನೀರು ಬೇಕೆಂದು ಕೇಳುತ್ತಿದ್ದಾರೆ. ಅವರುಗಳು ಇರತಕ್ಕ ಗುಡಿಸಲುಗಳಿಗೆ ರಸ್ತೆ ಮಾಡಬೇಕಾದರೆ ೨೫ ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ನನಗೆ ಅವರಗಳ ಮತಬೇಡವೆಂದು ಹೇಳಬಹುದು, ಮುಂದೆ ಬರುವವರಿಗೆ ಹೇಕು. ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಗುಡಿಸಲುಗಳನ್ನು ತಡೆಗಟ್ಟುವ ಬಗ್ಗೆ ಪಂಚಾಯಿತಿಯವರನ್ನು ಕೇಳಿದರೆ, ಆ ಪಂಚಾಯಿತಿಯವರು ನಮಗೆ ಬರುವುದಿಲ್ಲವೆಂದು ನಮ್ಮ ವ್ಯಾಪ್ತಿಯಲ್ಲಿಲ್ಲವೆಂದು ಹೇಳುತ್ತಾರೆ ಪಂಚಯಿತಿ ವ್ಯಾಪ್ತಿಯಲ್ಲೂ ಇಲ್ಲ, ತಹಶೀಲ್ದಾರರ ವ್ಯಾಪ್ತಿಯಲ್ಲೂ ಇಲ್ಲ ಇನ್ನು ನಾವು ಯಾರನ್ನು ಕೇಳುವುದು ? ಮೈಸೂರು ವಿಭಾಗಾಧಿಕಾರಿಗಳವರು ಆ ದಾರಿಯಲ್ಲಿ ಹೋಗುವಾಗ ಇಂತಹ ಗುಡಿಸಲಂಗಳನ್ನು ನೋಡಿ ಈ ರೀತಿ ಅನಧಿಕೃತವಾಗಿ ಗುಡಿಸಲುಗಳನ್ನು ಕಟ್ಟುವುದಕ್ಕೆ ಅವಕಾಶ ಕೊಡಬಾರದೆಂದು ಅವರು ಸಹ ಹೇಳಿದ್ದಾರೆ. ನಮ್ಮ ಪ್ರಾಂತ್ಯದಲ್ಲಿ ಆ ಗುಡಿಸಲುಗಳವರಿಗೆ ಮೂರುವರೆ ಸಾವಿರ ಎಕರೆ ಭೂಮಿಯನ್ನು ಕೊಡಲಾಗಿದೆ. ಸರ್ಕಾರ ಈ ವಿಷಯವನ್ನು ಗಮನಕ್ಕೆ ತೆಗೆದುಕೊಂಡು ಆ ರೀತಿ ಅನಧಿಕೃತ ಗ್ರಾಮಗಳು ನಿರ್ಮಾಣವಾಗುವುದಕ್ಕೆ ಅವಕಾಶ ಕೊಡಬಾರದು. ಯಾರೇ ಬಂದರೂ ಅಧಿಕಾರಿಗಳ ಮನಕ್ಕೆ ಬಾರದೆ ಇರಬಾರದು. ಇಂತಹ ಗ್ರಾಮಗಳಿಗೆ ಮಾನ್ಯತೆ ಮತ್ತೆ ನಾಗರೀಕ ಸೌಲಭ್ಯಗಳನ್ನು ಕೊಡುವುದು ಬೇಡ. ಗೋಪಿನಾಥಂನಲ್ಲಿರತಕ್ಕ ಜನಸಂಖ್ಯೆ ೨೦೦೦. ಆ ಗ್ರಾಮಕ್ಕೆ ನಮ್ಮ ಸರ್ಕಾರಕ್ಕೆ ೬೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದೆ. ಸರಾಸರಿ ಪ್ರತಿಯೊಬ್ಬ ಮನುಸ್ಯರಿಗೂ ಎರಡು ಸಾವಿರ ರೂಪಾಯಿ ಖರ್ಚಾದಂತಾಯಿತು.

ಶ್ರೀ ಕಾಗೋಡು ತಿಮ್ಮಪ್ಪ.—ಗೋಪಿನಾಥಂ ಕೆರೆ ಕಟ್ಟಡಕ್ಕೆ ನೀವೇ ಪ್ರಯತ್ನಪಟ್ಟವರು.

ಶ್ರೀ ಜಿ. ರಾಜೂಗೌಡ.—ಗೋಪಿನಾಥಂ ಗ್ರಾಮ ನಮ್ಮ ತಾಲ್ಲೂಕಿನ ಕೊನೆಯ ಭಾಗದಲ್ಲಿದೆ. ಅಲ್ಲಿ ಮುಖ್ಯಮಂತ್ರಿಗಳು ಸಹ ಬಂದಿದ್ದರು.

ಶ್ರೀ ಕಾಗೋಡುತಿಮ್ಮಪ್ಪ. —ಎಲ್ಲೇ ಗುಡಿಸಲುಗಳನ್ನು ಹಾಕಿದೆರು ಅದು ರೆವಿನ್ಯೂ ವಿಲೇಜ್ ಆಗಿರಲೆಬೇಕು, ನಮ್ಮ ಕಡೆಗಳಲ್ಲಿ ರೆವಿನ್ಯೂಲ್ಯಾಂಡ್‌ನಲ್ಲಿ ಗುಡಿಸಲುಗಳು ಇದ್ದರೆ ಅವು ಯಾವುದೇ ಪಂಚಾಯಿತಿಗೆ ಸೇರುತ್ತದೆ. ಆ ಕಡೆ ಇಲ್ಲದಿದ್ದರೆ ಅವು ರೆವಿನ್ಯೂ ವಿಲೇಜ್‌ಗಳಾಗಲೇ ಬೇಕು. ಗೋಪಿನಾಥಂ ಪೊನ್ನಾಜಿ ಅಲ್ಲಿಗೆ ನಮ್ಮ ಮುಖ್ಯ ಮಂತ್ರಿಗಳು ಹೆಲಿಕ್ಯಾಪ್ಟರ್‌ನಲ್ಲಿ ಹೋಗುವುದಕ್ಕೆ ತೊಂದರೆಯಾಯಿತೆಂದು ತಾವೇ ಹೇಳುತ್ತೀರಿ. ಇಂತಹ ಅನಧಿಕೃತ ಗ್ರಾಮಂಗಳು ನಿರ್ಮಾಣವಾಗುವುದಕ್ಕೆ ತಾವೇ ಅವಕಾಶ ಕೊಡುವುದು ಎಂದು ನನ್ನ ಅಭಿಪ್ರಾಯ. ದಯಮಾಡಿ ಮಾನ್ಯ ಸದಸ್ಯರು ತಂದಿರತಕ್ಕ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿಕೊಳ್ಳುತ್ತೇನೆ,

ಶ್ರೀ ಜಿ. ರಾಜೂ ಗೌಡ.—ನಾನು ತಂದಿರತಕ್ಕ ನಿರ್ಣಯವನ್ನು ವಾಪಸ್ಸು ತೆಗೆದುಕೊಂಡಿದ್ದೇನೆ.

MR. DEPUTY SPEAKER.—Is it the pleasure of the Houes that leave be granted to withdraw the resolution ?

*The Resolution was, by leave of the House, with drawn.*

ಉಪಾಧ್ಯಕ್ಷರು.—ಮಾನ್ಯ ಸದಸ್ಯರಾದ ಕೆ. ಪ್ರಭಾಕರ್ ತಮ್ಮ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಿ.

ಕರ್ನಾಟಕ ರಾಜ್ಯದಲ್ಲಿ ಬೆಳೆ ಹಾಗೂ ಜಾನುವಾರುಗಳ ವಿಮಾ ಯೋಜನೆ.

ಶ್ರೀ ಕೆ. ಪ್ರಭಾಕರ್ —ಕರ್ನಾಟಕ ರಾಜ್ಯದಲ್ಲಿ ಬೆಳೆ ಹಾಗೂ ಜಾನುವಾರುಗಳ ವಿಮಾ ಯೋಜನೆಯನ್ನು ಜನಪ್ರಿಯಗೊಳಿಸಲು ಸರಕಾರದವರು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಸಭೆಯು ಸರ್ವಾನುಮತದಿಂದ ನಿರ್ಣಯಿಸುತ್ತದೆ.

*The question was proposed.*

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಸದಸ್ಯರು ವಿವರಗಳನ್ನು ಆಮೇಲೆ ಹೇಳಲಿ.

ಶ್ರೀ ಕೆ. ಪ್ರಭಾಕರ್.—ಆಗಬಹುದು.

MR DEPUTY SPEAKER.—The House stands adjourned to meet again on Monday at 1-00 P.M.

*The House adjourned at Six-minutes past One of the Clock to meet again at One of the Clock on Monday the 14th June 1982.*